
# ಶ್ರೀರಾಮಕೃಷ್ಣರು ಯಾರು?

## ಸ್ವಾಮಿ ರಾಘವೇಶಾನಂದ

ಶ್ರೀರಾಮಕೃಷ್ಣ ಪರಮಹಂಸರ ವೈಶಿಷ್ಟ್ಯವನ್ನು ಸರಳವಾಗಿ ತಿಳಿಸಿಕೊಟ್ಟಿರುವ ಲೇಖಕರು ಬೆಳಗಾವಿಯಲ್ಲಿರುವ ರಾಮಕೃಷ್ಣ ಮಿಷನ್ ಆಶ್ರಮದ ಮುಖ್ಯಸ್ಥರಾಗಿದ್ದಾರೆ. ಹಲವಾರು ಪುಸ್ತಕಗಳನ್ನು ಬರೆದಿರುವ ಅವರು ಉತ್ತಮ ವಾಗ್ಮಿಗಳೂ ಆಗಿದ್ದಾರೆ.

**ಶ್ರೀರಾಮಕೃಷ್ಣರು ಯಾರು?** ಒಮ್ಮೊಮ್ಮೆ ಅವರ ಬಗ್ಗೆ ಚಿಂತಿಸುವಾಗ ಈ ಪ್ರಶ್ನೆ ನಮ್ಮನ್ನು ಭೂತಾಕಾರವಾಗಿ ಕಾಡುತ್ತದೆ. ಯಾಕೆ? ಅವರ ಬಗ್ಗೆ ಚಿಂತಿಸಿಲ್ಲವೇ? ಚಿಂತಿಸಿದ್ದೇವೆ, ಒಂದು ಕಲ್ಪನೆಯನ್ನು ಕೂಡ ಮಾಡಿಕೊಂಡಿದ್ದೇವೆ. ಆದರೆ ಅವರ ಬಗ್ಗೆ ಇರುವ ವಿವಿಧ ಗ್ರಂಥಗಳನ್ನು ಓದಿದಾಗ, ಅದರಲ್ಲೂ ಪ್ರಪಂಚದ ಹಲವು ಮೇಧಾವಿಗಳು ಅವರನ್ನು ಅಗಾಧವಾಗಿ, ಏಕಭಾವದಿಂದ ಸ್ತುತಿಸಿರುವುದನ್ನು ಕಂಡಾಗ, ಅವುಗಳೆಲ್ಲವನ್ನೂ ನಮ್ಮ ಬುದ್ಧಿಯಿಂದ, ಸಮರ್ಪಕ ದೃಷ್ಟಿಕೋನದಿಂದ, ಒರೆಗಲ್ಲಿಗೆ ಹಾಕಿ ವಿಮರ್ಶಿಸಿದಾಗ, ನಿಜಕ್ಕೂ ನಮಗೆ ಆಶ್ಚರ್ಯವಾಗುತ್ತದೆ ಮತ್ತು ಅನ್ನಿಸುತ್ತದೆ ನಾವು ಏನು ತಿಳಿದಿರುವೆವೋ ಅದು ಸಮುದ್ರತೀರದ ಮರಳರಾಶಿಯ ಒಂದು ಕಣ ಮಾತ್ರ ಎಂದು. ಮತ್ತೂ ಮತ್ತೂ ಅವರ ಬಗ್ಗೆ ಕೂಲಂಕಷವಾಗಿ, ಗಂಭೀರವಾಗಿ ಚಿಂತನೆ ಮಾಡೋಣ ಎನಿಸುತ್ತದೆ.



ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ಫ್ರೆಂಚ್ ದೇಶದ ರೋಮೇ ರೋಲಾ ಈ ಮಹಾಮಹಿಮ ಶ್ರೀರಾಮಕೃಷ್ಣರ ಬಗ್ಗೆ ಒಂದು ಅದ್ಭುತ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ರೋಲಾ ಖ್ಯಾತ ಕಾದಂಬರಿಕಾರರು ಹಾಗೂ ಮೇಧಾವಿಗಳ ನಡುವೆ ಅತ್ಯಂತ ಗೌರವಾನ್ವಿತ ವ್ಯಕ್ತಿ. ಅವರು ಶ್ರೀರಾಮಕೃಷ್ಣರ, ಸ್ವಾಮಿ ವಿವೇಕಾನಂದರ ಹಾಗೂ ಮಹಾತ್ಮಾ ಗಾಂಧಿಯವರ ಜೀವನಚರಿತ್ರೆಗಳನ್ನು ಬರೆದಿದ್ದಾರೆ. ಶ್ರೀರಾಮಕೃಷ್ಣರನ್ನು ಪಾಶ್ಚಾತ್ಯ ದೇಶಗಳಿಗೆ ತಮ್ಮ ಪ್ರಭಾವಪೂರ್ಣವಾದ ಬರಹಗಳ ಮೂಲಕ ಪರಿಚಯ ಮಾಡಿಕೊಟ್ಟವರಲ್ಲಿ ಅವರು ಪ್ರಮುಖರು

ಶ್ರೀರಾಮಕೃಷ್ಣರನ್ನು ಪರಿಚಯ ಮಾಡಿಕೊಡಲು ರೋಲಾ ಬಳಸಿರುವ ಶಬ್ದಗಳು ಅತ್ಯಂತ ಆರಾಧನಾಪೂರ್ವಕ ಹಾಗೂ ಅರ್ಥಪೂರ್ಣವಾದವು. ಶ್ರೀರಾಮಕೃಷ್ಣರ ಜೀವನವನ್ನು ಕೇವಲ ಓದಿದಷ್ಟರಿಂದಲೇ ಒಬ್ಬ ಪಾಶ್ಚಾತ್ಯ ವ್ಯಕ್ತಿಯಾದ ರೋಮೇ ರೋಲಾ ಅವರ ಭಾವನೆಗಳು ಎಷ್ಟು ಮಟ್ಟಿಗೆ ಬದಲಾದವು ಹಾಗೂ ಶ್ರೀರಾಮಕೃಷ್ಣರು ಅವರ ಜೀವನದ ಮೇಲೆ ಎಂತಹ ಪ್ರಭಾವವನ್ನು ಬೀರಿದರು ಎಂಬುದು ಗೊತ್ತಾಗುತ್ತದೆ. ರೋಲಾ ಅವರ ಬರವಣಿಗೆಯನ್ನು ಓದಿದ ಮೇಲೆ ನಮ್ಮ ಕಲ್ಪನೆಯೂ ವಿಶಾಲವಾಗುತ್ತದೆ. ರೋಲಾ ಶ್ರೀರಾಮಕೃಷ್ಣರ ಬಗ್ಗೆ ಹೀಗೆ ಬರೆಯುತ್ತಾರೆ: "ಯಾರ ಮೂರ್ತಿಯನ್ನು ನಾನು ಇಲ್ಲಿ ಆವಾಹಿಸಲು ಇಚ್ಛಿಸುತ್ತೇನೆಯೋ.." ಇಲ್ಲಿ ಬಳಸಿರುವ ಪದಗಳನ್ನು ನಾವು ಗಮನಿಸಬೇಕು. Evoke ಅಥವಾ ಆವಾಹಿಸು ಎಂಬ ಶಬ್ದವನ್ನು ಸಾಧಾರಣವಾಗಿ ದೇವತೆಗಳ ಸಂಬಂಧವಾಗಿ ಉಪಯೋಗಿಸುತ್ತೇವೆ. ಒಬ್ಬ ವಿಚಾರವಂತ ಪಾಶ್ಚಾತ್ಯನಿಗೆ ಶ್ರೀರಾಮಕೃಷ್ಣರು ಆಗಲೇ ದೇವತಾಸ್ವರೂಪರಾಗಿದ್ದರು. ಪೂಜ್ಯತೆಯನ್ನು ಹೊಮ್ಮಿಸುವ ಶಬ್ದಗಳನ್ನು ಬಳಸುತ್ತಾ ರೋಲಾ ಹೇಳುತ್ತಾರೆ: "ಯಾರ ಮೂರ್ತಿಯನ್ನು ನಾನಿಲ್ಲಿ ಆವಾಹಿಸುತ್ತಿದ್ದೇನೆಯೋ ಆ ವ್ಯಕ್ತಿಯು ಮೂವತ್ತು ಕೋಟಿ ಜನರ ಎರಡು ಸಹಸ್ರ ವರ್ಷಗಳ ಆಧ್ಯಾತ್ಮಿಕ ಜೀವನದ ಪರಾಕಾಷ್ಠೆಯಾಗಿದ್ದರು. ಅವರು ಕಾಲವಾಗಿ ನಲವತ್ತು ವರ್ಷಗಳಾಗಿದ್ದರೂ ಸಹ ಅವರ ಆತ್ಮ ಆಧುನಿಕ ಭಾರತವನ್ನು ಪ್ರಚೋದಿಸುತ್ತಿದೆ."

ರೋಲಾರ ಅಭಿಪ್ರಾಯದಲ್ಲಿ ಆಧುನಿಕ ಭಾರತ ಎಂದರೆ "ತನ್ನ ವಿವಿಧ ಮತ ಪಂಥಗಳಂತೆ ಆಧುನಿಕ ವಿಜ್ಞಾನ ತಂತ್ರಶಾಸ್ತ್ರಗಳನ್ನೂ ತನ್ನಲ್ಲಿ ಕ್ರೋಢೀಕರಿಸಿಕೊಂಡಿರುವ ಭಾರತ, ಸಮಾಜದ ನೂತನ ಬದಲಾವಣೆಗಳನ್ನು ತನ್ನಲ್ಲಿ ಅಳವಡಿಸಿಕೊಂಡಿರುವ ಭಾರತ." ಮತ್ತೆ ರೋಮೇ ರೋಲಾ ಮುಂದುವರಿಸುತ್ತಾರೆ: "ಶ್ರೀರಾಮಕೃಷ್ಣರು ಗಾಂಧಿಯಂತೆ ತಮ್ಮ ರಾಜಕೀಯ ವರ್ಚಸ್ಸಿನಿಂದ ಕಂಗೊಳಿಸಿದವರಲ್ಲ ಅಥವಾ ಗಯಟೆ, ಟಾಗೋರರ ಹಾಗೆ ಕಲೆ ಮತ್ತು ಬೌದ್ಧಿಕ ಕ್ಷೇತ್ರದ ಮಹಾವ್ಯಕ್ತಿಯಾಗಿರಲಿಲ್ಲ. ಅವರು ಕೇವಲ ಬಂಗಾಳದ ಸಣ್ಣ

ಗ್ರಾಮದ ಒಬ್ಬ ಬ್ರಾಹ್ಮಣ. ಅವರ ಬಾಹ್ಯ ಜೀವನ ಒಂದು ಸೀಮಿತ ಚೌಕಟ್ಟಿನಲ್ಲಿದ್ದು ಯಾವ ಪವಾಡಸದೃಶವಾದ ಘಟನೆಯನ್ನೂ ಹೊಂದಿರಲಿಲ್ಲ. ಅವರ ಪ್ರಭಾವ ಅಂದಿನ ರಾಜಕೀಯ ಮತ್ತು ಸಾಮಾಜಿಕ ಗೊಂದಲಗಳಿಗೆ ಹೊರತಾಗಿತ್ತು. ಆದರೆ ಅವರ ಆಂತರಂಗಿಕ ಜೀವನ ಇಡೀ ಜನತೆಯ ಮತ್ತು ದೇವತೆಗಳ ಸಮೂಹವನ್ನು ಒಳಗೊಂಡಿತ್ತು. ನಿಜಕ್ಕೂ ಅವರ ಜೀವನವು ಸಕಲ ಶಕ್ತಿಗಳ ಮೂಲವಾದ ದಿವ್ಯ ಆಧ್ಯಾತ್ಮಶಕ್ತಿಯ ಒಂದು ಅಭಿವ್ಯಕ್ತಿಯಾಗಿತ್ತು."

ಈ ಮಾತನ್ನು ನಾವು ದೃಢಪಡಿಸಿಕೊಳ್ಳಲು ಸಾಧ್ಯವಾದರೆ, ವಿಚಾರಮಾಡಿ ಅರಿತು, ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಾದರೆ ಶ್ರೀರಾಮಕೃಷ್ಣರು ಯಾರು, ಅವರು ಹೇಗೆ ದೇವರ ದೇವರಾಗಿದ್ದರು ಎಂಬುದು ವೇದ್ಯವಾಗುತ್ತದೆ.

ರೋಮೇ ರೋಲಾ ಶ್ರೀರಾಮಕೃಷ್ಣರ ಜೀವನವನ್ನು ಓದಿ ಸಂತೋಷದಿಂದ ಹುಚ್ಚಾಗಿದ್ದ ವ್ಯಕ್ತಿ. ಶ್ರೀರಾಮಕೃಷ್ಣರನ್ನು ಎಷ್ಟು ವರ್ಣಿಸಿದರೂ ತೃಪ್ತಿಯಾಗುತ್ತಿರಲಿಲ್ಲ ಅವರಿಗೆ. ಒಬ್ಬ ಪ್ರಬುದ್ಧ ವಿಮರ್ಶಕರಾದ್ದರಿಂದ ಅವರ ಬರವಣಿಗೆ ತೀಕ್ಷ್ಣವಾಗಿರುತ್ತಿತ್ತು. ಅಲ್ಲಿ ಯಾವ ಉದ್ವೇಗವೂ ಇರುತ್ತಿರಲಿಲ್ಲ. ತಮ್ಮ ವೈಯಕ್ತಿಕ ಅನುಭವವನ್ನು ವಿವರಿಸಲು ಅಂಜಬೇಕೆ? ರೋಲಾ ಬರೆದರು: "ನಾನು ಯೂರೋಪಿಗೆ, ಅದು ಇಲ್ಲಿಯವರೆಗೆ ಕಂಡರಿಯದ ರಾಮಕೃಷ್ಣ ಎಂಬ ಹೆಸರಿನ ಒಂದು ಹೊಸ ರಸಭರಿತ ಫಲವನ್ನು, ಒಂದು ಆತ್ಮಸಂದೇಶವನ್ನು, ಭಾರತದ ಸ್ವರಮೇಳವನ್ನು ತರುತ್ತಿದ್ದೇನೆ."

ಇಲ್ಲಿ ನಾವು ಸ್ವಲ್ಪ ಯೋಚಿಸಬೇಕು. ಈ ದಿವ್ಯಶಕ್ತಿ ಸ್ವರೂಪರಾದ ಶ್ರೀರಾಮಕೃಷ್ಣರ ಜೀವನಚರಿತ್ರೆಯನ್ನು ಬರೆಯುವಂತೆ ರೋಲಾರನ್ನು ಪ್ರೇರೇಪಿಸಿದ್ದು ಯಾವುದು? ಇದೊಂದು ಸ್ವಾರಸ್ಯಕರವಾದ ವಿಷಯ. ಯುದ್ಧ ವಿರೋಧಿಯಾದ ರೋಮೇ ರೋಲಾ ಮೊದಲ ಜಾಗತಿಕ ಮಹಾಯುದ್ಧದ ವೇಳೆಯಲ್ಲಿ ಯುದ್ಧವನ್ನು ತಡೆಯುವಂಥ ಚಳುವಳಿಯನ್ನು ಪ್ರಾರಂಭಿಸಿದರು. ಇವರು ಯುದ್ಧವಿರೋಧಿ ಎಂಬುದನ್ನು ಗಮನಿಸಿದ ಸರ್ಕಾರ, ಇವರನ್ನು ಸೆರೆಯಲ್ಲಿ ಇಟ್ಟಿತು. ಯುದ್ಧ ಮುಗಿದ ನಂತರ ಅವರನ್ನು ಹೊರಬಿಟ್ಟಿತು. ಆದರೆ, ಹೊರಗೆ ಬಂದಾಗ ಅವರು ಕಂಡದ್ದೇನು? ಯುದ್ಧಾವಶೇಷಗಳ ಭಗ್ನರಾಶಿ. ಶಾಂತನಿದ್ರೆಯನ್ನು ಕಳೆದುಕೊಂಡು ಪರಿತಪಿಸುತ್ತಿದ್ದ ಯೂರೋಪ್—ಇದೇ ಅವರಿಗೆ ನೋಡಲು ಸಿಕ್ಕಿದ ದೃಶ್ಯ.

"ದೇವರು ಎಂದರೆ ಜನರನ್ನು ಕೊಲ್ಲುವಲ್ಲಿ ನಿರತನಾದ ಬ್ರಿಟಿಷ್ ಜನರಲ್ ಏನೋ ಎಂಬ ಭಾವನೆ ಜನರಿಗೆ ಬಂದಂತಿತ್ತು"—ಎಂದು ಬಣ್ಣಿಸುತ್ತಾರೆ ಜಾರ್ಜ್ ಬರ್ನಾರ್ಡ್ ಶಾ. ನಿಜಕ್ಕೂ ಆ ಘೋರ ಯುದ್ಧವು ಜನರಿಗೆ ಭಗವಂತನಲ್ಲಿದ್ದ ನಂಬಿಕೆಯನ್ನೇ ನಾಶಮಾಡಿತ್ತು. ಧರ್ಮವು ಆಯ ತಪ್ಪಿದಂತಿತ್ತು. ಆದರೆ ರೋಮೇ ರೋಲಾ ದೇವರಲ್ಲಿ ನಂಬಿಕೆಯಿಟ್ಟಿದ್ದ ವ್ಯಕ್ತಿ. ಅವರಿಗೆ ಮಾನವನ ಹೃದಯದಲ್ಲಿರುವ ಭಗವತ್-ಶಕ್ತಿಯಲ್ಲಿ ಅಗಾಧ ವಿಶ್ವಾಸವಿತ್ತು. ದುಃಖದಿಂದ ಹೇಳಿಕೊಳ್ಳುತ್ತಾರೆ ರೋಲಾ, "ಆ ಅಂತರಂಗದ ದ್ವಾರವನ್ನು ತೆರೆಯಬಲ್ಲ ಕೀಲಿಕೈ ನನಗೆ ಸಿಕ್ಕಿರಲಿಲ್ಲ. ಜನರ ಮೇಲೆ ಪ್ರಭಾವವನ್ನು ಬೀರಿದ್ದ ಶೇಕ್ಸ್‌ಪಿಯರ್, ಬಿಥೋವನ್, ಟಾಲ್‌ಸ್ಟಾಯ್ ಇವರ್‍ಯಾರ ಬಳಿಯೂ ಆ ದಿವ್ಯ ಕೀಲಿಕೈ ಇರಲಿಲ್ಲ." ಅಂತಹ ಒಂದು ಸಂದರ್ಭದಲ್ಲಿ ಜನರಿಗೆ ಮತ್ತೆ ದೇವರಲ್ಲಿ ನಂಬಿಕೆಯನ್ನು ಹೇಗೆ ಹುಟ್ಟಿಸುವುದು ಎಂದು ಪರಿತಪಿಸುತ್ತಿದ್ದಾಗ ಅವರಿಗೆ ಶ್ರೀರಾಮಕೃಷ್ಣರ ಜೀವನ ಚರಿತ್ರೆಯ ಒಂದು ಪುಸ್ತಕ ದೊರೆಯಿತು. ಅದನ್ನು ಓದುತ್ತಾ ಓದುತ್ತಾ ಅವರ ಮೈ ರೋಮಾಂಚನಗೊಂಡಿತು. ಶ್ರೀರಾಮಕೃಷ್ಣರ ಅಭೂತಪೂರ್ವ ಜೀವನ ಅವರ ಮೇಲೆ ಎಂತಹ ಪ್ರಭಾವ ಬೀರಿತೆಂದರೆ ಆನಂದಾತಿರೇಕದಿಂದ ಉದ್ಗರಿಸಿದರು: "ಆಹ್! ಇದೋ ಕ್ರಿಸ್ತ ಮತ್ತೆ ಜನ್ಮ ತಾಳಿದ್ದಾನೆ: ಅಂತರಂಗದ ದಿವ್ಯ ಸಾಮ್ರಾಜ್ಯಕ್ಕೆ ನನಗೆ ಕೀಲಿಕೈ ಸಿಕ್ಕೇಬಿಟ್ಟಿತು." ಶ್ರೀರಾಮಕೃಷ್ಣರು ಭವಿಷ್ಯದ ಜಗತ್ತಿನ ಭರವಸೆ ಎಂಬ ದೃಢ ವಿಶ್ವಾಸ ಅವರಲ್ಲಿ ಮೂಡಿತು. ಈ ನೂತನ ಅವತಾರಪುರುಷನ ಸಂದೇಶವನ್ನು ಬಿತ್ತರಿಸಲು ಅವರು ಒಡನೆಯೇ ಕಾರ್ಯೋನ್ಮುಖರಾದರು.

೧೯೨೯ನೇ ಇಸವಿಯಲ್ಲಿ 'ದಿ ಏಷಿಯಾ' ಎಂಬ ಆಂಗ್ಲ ಪತ್ರಿಕೆಯು ರೋಮೇ ರೋಲಾ ರಚಿಸಿದ ಶ್ರೀರಾಮಕೃಷ್ಣರ ಜೀವನ ಚರಿತ್ರೆಯನ್ನು ಧಾರಾವಾಹಿಯಾಗಿ ಪ್ರಕಟಿಸಿತು. ಆ ಪತ್ರಿಕೆಯ ಸಂಪಾದಕರು ಈ ಮಹಾದ್ಭುತ ಚರಿತ್ರೆಯನ್ನು ಓದುಗರಿಗೆ ಹೀಗೆ ಪರಿಚಯಿಸುತ್ತಾರೆ: "ಶ್ರೀರಾಮಕೃಷ್ಣರ ಜೀವನಚರಿತ್ರೆಯು ಪಾಶ್ಚಾತ್ಯರಿಗೆ ಒಂದು ಸಂದೇಶವನ್ನು ನೀಡುತ್ತದೆ. ಈ ಸಂದೇಶ ಅತ್ಯಂತ ಸ್ಪಷ್ಟವೂ, ಸಮಗ್ರವೂ ಆದುದು. ಈ ಹಿಂದೂ ಸಂತನ ಜೀವನವನ್ನು ಹೆಚ್ಚು ಹೆಚ್ಚು ಪ್ರಚಾರ ಮಾಡಿದಾಗ ಅದು ಮಾನವ ಚೇತನವನ್ನು ಸರ್ವವಿಧದಲ್ಲೂ ಸಂಪನ್ನಗೊಳಿಸಬಲ್ಲುದು. ಧನ್ಯೆ ಭಾರತ ಮಾತೆ, ಆ ದಕ್ಷಿಣೇಶ್ವರದ ದೇವಮಾನವನಿಗೆ ಜನ್ಮವಿತ್ತು ಇಡೀ ಜಗತ್ತನ್ನೇ ಋಣಿಯಾಗಿಸಿರುವೆ."

ರೋಮೇ ರೋಲಾರ ಈ ಪುಸ್ತಕವು ಪಾಶ್ಚಾತ್ಯರ ಮನಸ್ಸಿನ ಮೇಲೆ ಅಗಾಧವಾದ ಪ್ರಭಾವವನ್ನು ಬೀರಿತು. ೮೦ ವರ್ಷಗಳ ನಂತರ, ಅಂದರೆ ಈಗಲೂ, ಅಷ್ಟೇ ಪ್ರಭಾವವನ್ನು ಬೀರುತ್ತಿದೆ. ಶ್ರೀರಾಮಕೃಷ್ಣರು ಅವತರಿಸಿದ್ದು ಯಾವುದೇ ಒಂದು ರಾಷ್ಟ್ರಕ್ಕಾಗಿ ಅಥವಾ ಜನಾಂಗಕ್ಕಾಗಿ ಅಲ್ಲ. ಅವರೊಬ್ಬ ವಿಶ್ವಮಾನವ.

ಹಾಗೆಯೇ ವಿಶ್ವಮಾನವಪ್ರೇಮಿ. ಅವರ ಸಂದೇಶವು ಎಲ್ಲ ಜಾತಿ, ಪಂಗಡ, ರಾಷ್ಟ್ರಗಳ ಪರಿಧಿಯನ್ನೂ ಮೀರಿರುವಂಥದ್ದು. ಅವರು ಇಡೀ ಜಗತ್ತಿನ ಆಸ್ತಿ. ಅವರು ದೇವರ ದೇವ, ಎಲ್ಲರ ಪಾಲಿನ ದೇವ.

ಈ ಕುರಿತಾಗಿ ಸ್ವತಃ ಅವರೇ ದಿವ್ಯವಾಣಿಯನ್ನು ನುಡಿದಿರಲಿಲ್ಲವೇ? "ಯಾರಿಗೆ ಇದೇ ಕೊನೆಯ ಜನ್ಮವೋ ಅವರು ನನ್ನಲ್ಲಿಗೆ ಬಂದೇ ಬರುತ್ತಾರೆ", ಎಂದು. ಮತ್ತೊಮ್ಮೆ ತಮ್ಮ ಭಾವಚಿತ್ರವನ್ನು ತೋರಿಸುತ್ತಾ ಹೇಳಿದ್ದರು, 'ನೋಡುತ್ತಾ ಇರು. ಈ ಭಾವಚಿತ್ರವು ಮನೆಮನೆಗಳಲ್ಲೂ ಪೂಜೆಗೊಳ್ಳುತ್ತದೆ." ಇದು ಬಹಳ ಬೇಗ ನಿಜವಾಗುತ್ತಿದೆ. ಶ್ರೀರಾಮಕೃಷ್ಣರು ಪ್ರಪಂಚದ ಎಲ್ಲೆಡೆ ವ್ಯಾಪಿಸುತ್ತಿದ್ದಾರೆ. ಜನರ ಜೀವನ ಸ್ಥಿತಿಯನ್ನು ಸುಧಾರಿಸಲು, ಮನಸ್ಸಿಗೆ ಶಾಂತಿಯನ್ನು ನೀಡಲು, ಅಂತರಂಗದಲ್ಲಿ ಆನಂದವನ್ನು ಕರುಣಿಸಲು, ಜನ ಮಾನಸದಲ್ಲಿ ಪರಿವರ್ತನೆಯನ್ನುಂಟುಮಾಡಿ ಸೌಹಾರ್ದತೆಯ ಜೀವನವನ್ನು ನಡೆಸುವಂತೆ ಪ್ರಚೋದಿಸಲು, ಶ್ರೀರಾಮಕೃಷ್ಣಶಕ್ತಿಯು ಹೇಗೆ ಸದ್ದುಗದ್ದಲವಿಲ್ಲದೆ ಕಾರ್ಯಪ್ರವೃತ್ತವಾಗಿದೆ ಎಂಬುದನ್ನು ಮನಗಾಣಲು ನಾವು ಇನ್ನೊಂದು ಘಟನೆಯನ್ನು ನೋಡಬಹುದು.

ಹಲವು ವರ್ಷಗಳ ಹಿಂದೆ, ರಷ್ಯಾ ದೇಶವು ವಿಭಜನೆಗೊಳ್ಳುವುದಕ್ಕೆ ಮುಂಚೆ, ದಿವಂಗತ ಸ್ವಾಮಿ ರಂಗನಾಥಾನಂದಜಿಯವರು ಅಲ್ಲಿಗೆ ಭೇಟಿ ನೀಡಿದ್ದರು. ಅದೊಂದು ಕಮ್ಯುನಿಸ್ಟ್ ರಾಜ್ಯವಾದುದರಿಂದ ಅಲ್ಲಿ ಧರ್ಮಪ್ರಚಾರಕ್ಕಾಗಲಿ, ಆಚರಣೆಗಾಗಲಿ ಅವಕಾಶವಿರಲಿಲ್ಲ. ಸ್ವಾಮೀಜಿಯವರು ಆ ದೇಶದ ಮೂಲಕ ಹಾದುಹೋಗುತ್ತಿದ್ದರು. ಅಲ್ಲಿ ಅವರ ಯಾವುದೇ ನಿಗದಿತ ಕಾರ್ಯಕ್ರಮವೂ ಇರಲಿಲ್ಲ. ಒಂದೆರಡು ದಿನ ಅವರು ಸುಮ್ಮನೆ ಅಲ್ಲಿ ತಂಗಿದ್ದರು. ಒಂದು ದಿನ ಸಂಜೆ ಅವರನ್ನು ಭಾರತದ ರಾಯಭಾರಿ ಕಛೇರಿಯವರು ಅಲ್ಲಿ ನಡೆಯುತ್ತಿದ್ದ ಅಂತಾರಾಷ್ಟ್ರೀಯ ಸಂಗೀತ ಉತ್ಸವಕ್ಕೆ ಕರೆದೊಯ್ದರು. ಅವರು ಮುಂದಿನ ಸಾಲಿನಲ್ಲಿ ಕುಳಿತಿದ್ದಾಗ, ಒಬ್ಬ ವೃದ್ಧ ರಷ್ಯನ್ ಮಹಿಳೆ ಅವರ ಬಳಿ ಸಾರಿ ಕೇಳಿದಳು— "ನೀವು ಭಾರತದಿಂದ ಆಗಮಿಸಿರುವಿರಾ?" ಸ್ವಾಮೀಜಿ ಹೌದೆಂದು ಸೂಚಿಸಿದರು. ತಕ್ಷಣವೇ ಆ ವೃದ್ಧೆಯ ಮುಖದಲ್ಲಿ ಒಂದು ಕಾಂತಿಯ ನಗೆ ಮೂಡಿತು. ಮತ್ತೆ ಆಕೆ ಮೆಲುದನಿಯಲ್ಲಿ ಪಿಸುಗುಟ್ಟಿದಳು, "ನೀವು ರಾಮಕೃಷ್ಣರ ಅನುಯಾಯಿಗಳೇ?" ಆಶ್ಚರ್ಯದಿಂದ ಸ್ವಾಮೀಜಿ ಹೌದೆಂದು ತಲೆಯಾಡಿಸಿದರು. ಅವಳ ಮುಖ ಅರಳಿತು. "ನಾನೂ ರಾಮಕೃಷ್ಣರ ಅನುಯಾಯಿ. ಇಲ್ಲಿ ನಾವು, ರಾಮಕೃಷ್ಣರ ನೂರು ಜನ ಅನುಯಾಯಿಗಳಿದ್ದೇವೆ. ನಮ್ಮದೊಂದು ಸಂಘವೂ ಇದೆ" ಎಂದಳು ಆ ವೃದ್ಧೆ. ಸ್ವಾಮೀಜಿ ಪಿಸುದನಿಯಲ್ಲಿ ಆ ಮಹಿಳೆಗೆ ಕೇಳಿದರು, "ನಿಮಗೆ ಅವರ ಬಗ್ಗೆ ಹೇಗೆ ತಿಳಿಯಿತು?" ಅದಕ್ಕೆ ಆ ಮಹಿಳೆ ಉದ್ಗರಿಸುತ್ತಾಳೆ, "ಓಹ್, ನಾವು ಗುಪ್ತವಾಗಿ ಒಂದೆಡೆ ಸೇರಿ ಅವರ ಧ್ಯಾನ ಮಾಡುತ್ತೇವೆ. ನಾವು ರೋಮೇ ರೋಲಾ ರಚಿಸಿರುವ ಶ್ರೀರಾಮಕೃಷ್ಣರ ಕುರಿತ ಪುಸ್ತಕವನ್ನು ಓದುತ್ತೇವೆ."

ಇಂದು ರಷ್ಯಾದಲ್ಲಿ ರಾಮಕೃಷ್ಣ ಮಹಾಸಂಘದ ಅಧಿಕೃತ ಕೇಂದ್ರವೊಂದು ತಲೆಯೆತ್ತಿ ನಿಂತಿದೆ. ಕೆಲವು ವರ್ಷಗಳ ಹಿಂದೆ ಬಂಗಾಳಿ ಭಾಷೆಯ 'ಶ್ರೀರಾಮಕೃಷ್ಣ ಕಥಾಮೃತ' ಲಕ್ಷಲಕ್ಷ ಗಟ್ಟಲೆ ಪ್ರತಿಗಳು ಹಠಾತ್ತನೆ ಮಾರಾಟವಾಗಲು ಶುರುವಾಯಿತು. ಪ್ರಕಾಶಕರಲ್ಲಿ ಪೈಪೋಟಿ ಎದ್ದಿತು, ಯಾರು ಎಷ್ಟು ಕಡಿಮೆ ಬೆಲೆಗೆ ಅದನ್ನು ಕೊಡಬಹುದು ಎಂದು. ಆಗ ಕೇರಳದ 'ದಿ ವೀಕ್' ಎಂಬ ವಾರಪತ್ರಿಕೆಯು ಮುಖಪುಟದಲ್ಲಿ ಶ್ರೀರಾಮಕೃಷ್ಣರ ಭಾವಚಿತ್ರವನ್ನು ಹಾಕಿ 'Sri Ramakrishna conquers Communism' ಎಂದು ಪ್ರಕಟಿಸಿತು. ಭಾರತದಲ್ಲಿ ಕಮ್ಯುನಿಸಂನ ತವರಿನಂತಿರುವ ಪಶ್ಚಿಮ ಬಂಗಾಳದಲ್ಲೇ ಹುಟ್ಟಿದ ಶ್ರೀರಾಮಕೃಷ್ಣರು, ಆ ಪಕ್ಷವನ್ನೇ ಅತಿಕ್ರಮಿಸಿದ್ದ ತ್ರಿವಿಕ್ರಮ.

ನಿಜ, ಶ್ರೀರಾಮಕೃಷ್ಣರು ಎಲ್ಲಾ ಪರಿಮಿತಿಗಳನ್ನೂ, ಎಲ್ಲಾ ಎಲ್ಲೆಗಳನ್ನೂ—ಜಾತಿ, ಧರ್ಮ, ಜನಾಂಗ, ರಾಷ್ಟ್ರಗಳ ಸೀಮೆಯನ್ನೂ—ಮೀರಿ ಎಲ್ಲೆಲ್ಲೂ ವ್ಯಾಪಿಸುತ್ತಿದ್ದಾರೆ. ಅವರೊಂದು ದೇದೀಪ್ಯಮಾನವಾದ ಜ್ವಾಲೆ. ಯಾರೂ ಅವರ ಪ್ರಭಾವವನ್ನು ತಡೆಗಟ್ಟಲಾರರು. ಅವರಲ್ಲಿ ಮತಾಂತರ ಮಾಡುವ ಖಡ್ಗವಿಲ್ಲ. ಅವರವರ ಧರ್ಮಕ್ಕನುಸಾರವಾಗಿ ಅವರವರಿಗೆ ದರ್ಶನವಿತ್ತು ಎಲ್ಲರನ್ನೂ ಆಲಿಂಗಿಸಿಕೊಂಡು, ಅವರ ಜೀವನದಲ್ಲಿ ಶಾಂತಿ, ಸೌಹಾರ್ದವನ್ನು ತಂದು, ಭಗವಂತನೆಡೆಗೆ ಕರೆದೊಯ್ಯುವ ಮಹದಭಿಲಾಷೆ ಅವರದು.

ಅವರು ಜೀವಿಸಿದ್ದ ಸಮಯದಲ್ಲೇ ನಡೆದ ಒಂದು ಅಪೂರ್ವ ಘಟನೆಯಿದು. ಕಲ್ಕತ್ತೆಯ ಒಂದೆಡೆಯಲ್ಲಿ ಒಂದು ಮಸೀದಿಯ ಮುಂದೆ ಒಬ್ಬ ಮಹಮದೀಯ ಭಕ್ತ ಕಾತರ ಭಾವದಿಂದ ಕಣ್ಣೀರು ಸುರಿಸುತ್ತಾ ಕೂಗಿ ಕೂಗಿ ಪ್ರಾರ್ಥಿಸುತ್ತಿದ್ದ, "ಅಲ್ಲಾ, ನನಗೆ ನೀನು ದರ್ಶನ ಕೊಡುವುದಿಲ್ಲವೇ?" ಎಂದು. ನೋಡಲು ಹುಚ್ಚನಂತಿದ್ದ. ಹರಿದ ಬಟ್ಟೆ, ಕೆದರಿದ ಕೂದಲು, ಅದರ ಮೇಲೆ ಒಂದು ಟೊಪ್ಪಿ. ಅವನ ಕೂಗು ಎಲ್ಲರ ಮನವನ್ನೂ ಕರಗಿಸುವಂತಿತ್ತು. ಹಠಾತ್ತನೆ ಒಂದು ಕುದುರೆಯ ಸಾರೋಟು ಅವನ ಹತ್ತಿರ ಬಂದು ನಿಂತಿತು. ಅದರಿಂದ ಶ್ರೀರಾಮಕೃಷ್ಣರು ನಿಧಾನವಾಗಿ ಕೆಳಗಿಳಿದರು. ಅವರು ಅರ್ಧ ಸಮಾಧಿಸ್ಥಿತಿಯಲ್ಲಿದ್ದರು. ಮುಖ ಕಾಂತಿಯಿಂದ, ಆನಂದದಿಂದ ತುಂಬಿತ್ತು. ಇಳಿದುದೇ ತಡ, ಅವನನ್ನು ಆಲಿಂಗಿಸಿಕೊಂಡು ಮೈಮರೆತರು. ಅವನು

ಸಂತೋಷಾತಿಶಯದಿಂದ "ಹೇ ದೇವ, ಕೊನೆಗೂ ಬಂದೆಯಾ. ಧನ್ಯನಾದೆ" ಎಂದು ಮೈಮರೆತ. ಎರಡೇ ಕ್ಷಣ. ಮತ್ತೆ ಗಾಡಿ ಹತ್ತಿ ಶ್ರೀರಾಮಕೃಷ್ಣರು ಹೊರಟುಹೋದರು. ಇದನ್ನು ಪ್ರತ್ಯಕ್ಷವಾಗಿ ಕಂಡ ಮನ್ಮಥನಾಥ ಘೋಷ್ ಅನಂತರ ಇದನ್ನು ಕುಮುದ್‌ಬಂಧು ಸೇನರಿಗೆ ತಿಳಿಸಿದರು. ಶ್ರೀರಾಮಕೃಷ್ಣರು ಕಾಳೀಘಾಟ್‌ನಲ್ಲಿರುವ ದೇವಸ್ಥಾನದಿಂದ ಹಿಂತಿರುಗುತ್ತಿದ್ದರು. ಅವರ ಜೊತೆಯಲ್ಲಿ ಆಗ ರಾಮಲಾಲ ದಾದಾ ಕೂಡ ಇದ್ದರು [ಈ ಘಟನೆ ಬಂಗಾಳಿ ಮಾಸಪತ್ರಿಕೆ ಉದ್ಬೋಧನ್ (ಬಂಗಾಳಿ ವರ್ಷ: ೧೩೬೨) ಹಾಗೂ *Swami Premananda, Love Incarnate* ಪುಸ್ತಕದ ಪು.೨೦೫ರಲ್ಲಿ ಉಲ್ಲೇಖಗೊಂಡಿದೆ].

ಇಂದು ಪೂರ್ವಪಶ್ಚಿಮಗಳೆರಡೂ ಶ್ರೀರಾಮಕೃಷ್ಣರ ಅಮೃತಮಯ ಸಂದೇಶಕ್ಕಾಗಿ ಬಹಳವಾಗಿ ಹಸಿದಿವೆ. ದಿನೇದಿನೇ ಈ ಹಸಿವು ಹೆಚ್ಚಾಗುತ್ತಿದೆ.

ನಾವಿಂದು ಶ್ರೀರಾಮಕೃಷ್ಣರನ್ನು ಅವತಾರಪುರುಷ ಎನ್ನುತ್ತಿದ್ದೇವೆ. ಸ್ವಾಮಿ ವಿವೇಕಾನಂದರು ಅವರನ್ನು ಅಂದೇ ಅವತಾರವರಿಷ್ಠ ಎಂದು ಸ್ತುತಿಸಿದರು. ನಿಜಕ್ಕೂ ಅವತಾರ ಎಂದರೇನು? ಈ ಪ್ರಶ್ನೆ ಎದ್ದಾಗ ನಾವು ಸಾಮಾನ್ಯವಾಗಿ ಭಗವದ್ಗೀತೆಯನ್ನು ಮೊರೆಹೋಗುತ್ತೇವೆ, ಅಲ್ಲಿಯ ವಿವರಣೆ ಯನ್ನು ನೆನೆಯುತ್ತೇವೆ. **ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ**— "ಶಿಷ್ಟರನ್ನು ರಕ್ಷಿಸಲು, ದುಷ್ಟ ರನ್ನು ಶಿಕ್ಷಿಸಲು" ಎಂದರ್ಥ. ಆದರೆ ಶ್ರೀರಾಮಕೃಷ್ಣರ ಅವತಾರದ ವಿಷಯದಲ್ಲಿ ಅವತಾರತತ್ತ್ವದ ಅರ್ಥವನ್ನೇ ನಾವು ಪರಿಷ್ಕರಿಸಿಕೊಳ್ಳಬೇಕಾಗುತ್ತದೆ. ಅವತಾರತತ್ತ್ವದ ಕುರಿತಾದ ನಮ್ಮ ಕಲ್ಪನೆ-ಪರಿಕಲ್ಪನೆಗಳಿಗೆ ಅವರು ವಿನೂತನ ತಿರುವು ನೀಡಿದ್ದಾರೆ. ಅದಕ್ಕೇ ಅವರು ಅವತಾರವರಿಷ್ಠರು. ಶ್ರೀರಾಮಕೃಷ್ಣರ ಕುರಿತಾದದ್ದೆಲ್ಲವೂ ತುಂಬ ನೂತನ, ವೈಶಿಷ್ಟ್ಯಪೂರ್ಣ. ಎಷ್ಟರಮಟ್ಟಿಗೆಂದರೆ ಅವರ ಅವತಾರವೂ ಕೂಡ ಅತ್ಯಂತ ಅಪೂರ್ವವಾದದ್ದು.

ಹಿಂದಿನ ಅವತಾರಗಳಂತೆ ಈ ಬಾರಿ ಅವರು ದುಷ್ಟನಿಗ್ರಹ ಕಾರ್ಯಕ್ಕೆ ಕೈಹಾಕಲೇ ಇಲ್ಲ. ಬಿಲ್ಲು, ಬಾಣ, ಗದೆ, ಖಡ್ಗ ಯಾವುದರ ತಂಟೆಗೂ ಹೋಗಲಿಲ್ಲ. ಆಧುನಿಕ ಅಣ್ವಸ್ತ್ರ ಗಳಾಗಲಿ, ಬಾಂಬುಗಳಾಗಲಿ ಅವರಲ್ಲಿ ಇರಲಿಲ್ಲ. ಆದರೂ ಅವತಾರಗಳಲ್ಲಿ ಅವರು ಶ್ರೇಷ್ಠರು. ಈ ಅವತಾರದ ವೈಶಿಷ್ಟ್ಯವೆಂದರೆ ಅವರು ಯಾರಲ್ಲೂ ಭೇದವನ್ನೇ ಎಣಿಸಲಿಲ್ಲ. ದುರ್ಜನ-ಸಜ್ಜನ, ಪುರುಷ-ಸ್ತ್ರೀ, ಪಂಡಿತ-ಪಾಮರ, ಬ್ರಾಹ್ಮಣ-ಹರಿಜನ ಎಂಬ ಯಾವುದೇ ಭೇದವನ್ನೂ ಲಕ್ಷಿಸದೆ ಅವರು ತಮ್ಮ ಬಳಿಗೆ ಬಂದವರನ್ನೆಲ್ಲಾ ತಮ್ಮ ಅನಂತ ಕೃಪೆಯ, ಪ್ರೇಮದ ತೆಕ್ಕೆಯೊಳಗೆ ಬರಮಾಡಿಕೊಂಡು ಮುಕ್ತಿಯನ್ನು ಕರುಣಿಸಿದರು. ಅವರ ಕರುಣೆ ಎಷ್ಟಿತ್ತೆಂದರೆ, ಬೇರೆಯವರ ಪಾಪಗಳನ್ನು ತಾವೇ ಸ್ವೀಕರಿಸಿ, ಅವರನ್ನು ಉದ್ಧಾರ ಮಾಡು ತ್ತಿದ್ದರು. ಅವರ ಈ ಕೃಪಾಕಟಾಕ್ಷವು ಅವರ ಶರೀರತ್ಯಾಗ ದೊಂದಿಗೂ ಕೊನೆಗೊಳ್ಳಲಿಲ್ಲ.

ಯಾರ್‍ಯಾರಿಗೆ ಇದೇ ಅಂತಿಮ ಜನ್ಮವೋ ಅವರೆಲ್ಲರೂ ತಮ್ಮಲ್ಲಿಗೆ ಬಂದೇ ಬರುವರೆಂದು ಶ್ರೀರಾಮಕೃಷ್ಣರು ಮೊದಲೇ ಭವಿಷ್ಯ ನುಡಿದಿದ್ದರು. ಅಷ್ಟೇ ಅಲ್ಲದೆ, ಒಂದು ದಿನ ತಮ್ಮ ಭಾವಚಿತ್ರವನ್ನು ತಾವೇ ಹೂಗಳಿಂದ ಪೂಜೆಮಾಡಿ, ಮುಂದೆ ಪ್ರತಿಯೊಂದು ಮನೆಯಲ್ಲೂ ಇದು ಪೂಜೆಗೊಳ್ಳುತ್ತದೆ ಎಂಬುದಾಗಿಯೂ ಘೋಷಿಸಿದ್ದರು. ಯಾವಾಗಲೂ ತಮ್ಮನ್ನು "ಭಕ್ತರ ದಾಸರ ದಾಸ" ಎಂದು ಕರೆದುಕೊಳ್ಳುತ್ತಿದ್ದ ಅವರನ್ನು ಯಾರಾದರೂ 'ಗುರು' ಎಂದು ಸಂಬೋಧಿಸಿದರೆ ಚೇಳು ಕುಟುಕಿದಷ್ಟು ಯಾತನೆ ಅನುಭವಿಸುತ್ತಿದ್ದರು. ನಿರಹಂಕಾರದ ಸಾಕಾರ ಮೂರ್ತಿಯಾಗಿದ್ದ ಈ ಮಹಾತ್ಮರ ಬಾಯಿಂದ ಈ ಮಾತು ಬರಬೇಕಾಗಿದ್ದಲ್ಲಿ, ಇದರ ಸತ್ಯತೆಯ ಬಗ್ಗೆ ಸಂದೇಹ ಪಡುವ ಆವಶ್ಯಕತೆಯೇ ಇಲ್ಲ. ಇದು ಅವರಾಡಿದ ಮಾತಲ್ಲ. ಜಗನ್ಮಾತೆ ಅವರ ನಾಲಿಗೆಯಿಂದ ನುಡಿದ ಸತ್ಯವಾಕ್ಯ ಅಷ್ಟೆ!

ತಾವು ದೇವರೇ, ಅವತಾರಪುರುಷರೇ, ಸಂತರೇ ಇದಾವುದರ ಬಗ್ಗೆಯೂ ಅವರಿಗೆ ಆಸಕ್ತಿ ಇರಲಿಲ್ಲ. ಅವರ ಆಸಕ್ತಿಯೆಲ್ಲಾ ಮಾನವಾನುಕಂಪೆ, ಮಾನವನ ಉದ್ಧಾರ ಇವುಗಳಲ್ಲಿತ್ತು. ತಮ್ಮ ಜೀವನದ ಕಾರ್ಯ ಮುಗಿಯುವ ಹಂತದಲ್ಲಿ ಅವರು ನೂರಾರು ಜನರ ಪಾಪಗಳನ್ನು ತಾವೇ ಸ್ವೀಕರಿಸಿದ್ದರಿಂದ, ಭೀಕರವಾದ ಕ್ಯಾನ್ಸರ್ ರೋಗದಿಂದ ನರಳುತ್ತಿದ್ದರು. ಆ ರುಗ್ಣಾವಸ್ಥೆಯಲ್ಲಿ ಅವರ ಚಿಂತನೆ ಇದ್ದದ್ದು ಅವರ ದೇಹದ ಬಗೆಗಲ್ಲ, ಜಗತ್ತಿನಲ್ಲಿರುವ ದುಃಖಿತರ ಹಿತದ ಕುರಿತು! "ಗೋಮಯದಲ್ಲಿನ ಕ್ರಿಮಿಗಳಂತೆ ಪ್ರಪಂಚದಲ್ಲಿ ಸಿಲುಕಿಕೊಂಡು ಹೊರಳಾಡುತ್ತಿರುವ ಜನತೆಯ ಮುಕ್ತಿಗಾಗಿ ಶ್ರಮಿಸು" ಎಂದು ಆ ಕ್ಷಣದಲ್ಲೂ ಅವರು ತಮ್ಮ ಪತ್ನಿಗೆ ಆದೇಶ ನೀಡಿದರು.

ಮಾನವನನ್ನು ಆರಾಧ್ಯದೇವತೆಯನ್ನಾಗಿ ಕಂಡು, ಶಿವಭಾವ ದಿಂದ ಜೀವಸೇವೆಗೈಯಬೇಕೆಂದು ಹೇಳಿದ ಶ್ರೀರಾಮಕೃಷ್ಣರು ಅವತಾರವರಿಷ್ಠರಲ್ಲದೆ ಮತ್ತೇನು? ಸ್ವಾಮಿ ವಿವೇಕಾನಂದರ ಪಾಲಿಗೆ ಶ್ರೀರಾಮಕೃಷ್ಣರು ಕೇವಲ ಒಬ್ಬ ವ್ಯಕ್ತಿಯಾಗಿರಲಿಲ್ಲ, ಒಂದು ಅಮೂರ್ತ ಶಕ್ತಿಯಾಗಿದ್ದರು! ಶ್ರೀರಾಮಕೃಷ್ಣರನ್ನು ಅವರು ಮಾನವ ದೇಹಕ್ಕೆ ಸೀಮಿತವಾದ ಒಬ್ಬ ವ್ಯಕ್ತಿಯಾಗಿ ಕಾಣಲಿಲ್ಲ. ಅವರ ದೃಷ್ಟಿಯಲ್ಲಿ ಶ್ರೀರಾಮಕೃಷ್ಣರು ಸಾಕ್ಷಾತ್

ವಿಶ್ವವ್ಯಾಪಕ ಭಗವತ್‌ತತ್ತ್ವ, ಅನಂತ ಶಕ್ತಿ! ರೋಮೇ ರೋಲಾ ಅವರೂ ಸಹ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಅವರ ನುಡಿಗಳು ಸ್ಮರಣೀಯ: "ಶ್ರೀರಾಮಕೃಷ್ಣರು ಸಕಲ ಶಕ್ತಿಗಳ ಮೂಲವಾದ ಆದ್ಯಾಶಕ್ತಿಯ ಅಂಶ!"

ಆದುದರಿಂದಲೇ ಸ್ವಾಮಿ ವಿವೇಕಾನಂದರು ತಮ್ಮ ದಿವ್ಯ ಗುರುವಿನ ಬಗ್ಗೆ ಏನನ್ನು ಹೇಳಲೂ ಅಳುಕುತ್ತಿದ್ದರು. ಅವರ ಹೆಸರು ಕೇಳಿದರೆ ಸಾಕು, ಅವರ ಮನ ತುಂಬಿಬರುತ್ತಿತ್ತು, ಭಾವೋನ್ಮತ್ತರಾಗುತ್ತಿದ್ದರು. ಶ್ರೀರಾಮಕೃಷ್ಣರ ಜೀವನಚರಿತ್ರೆಯನ್ನು ರಚಿಸುವಂತೆ ಸ್ವಾಮೀಜಿಯವರನ್ನು ಒಮ್ಮೆ ಗಿರೀಶ್ ಚಂದ್ರ ಘೋಷ್ ಕೇಳಿಕೊಂಡಾಗ, ಅವರು ಕಂಬನಿ ಸುರಿಸುತ್ತಾ ತಮ್ಮ ಅಸಾಮರ್ಥ್ಯವನ್ನು ವ್ಯಕ್ತಪಡಿಸಿದರು. ಅವರಿಂದ ಅದು ಅಸಾಧ್ಯವೇನೂ ಆಗಿರಲಿಲ್ಲ. ಆದರೆ ದೇಶಕಾಲಗಳ ಪರಿಧಿಯನ್ನು ಮೀರಿ ನಿಂತು ಬೆಳಗುತ್ತಿರುವ ಶ್ರೀರಾಮಕೃಷ್ಣರ ಅನಂತ ದಿವ್ಯತೆಯನ್ನು ತಾವು ಬಣ್ಣಿಸಹೊರಟರೆ, ಆ ಅನಂತತೆಗೆ ಕುಂದು ಬಂದೀತೆಂಬ ಅಳುಕು ಅವರಿಗೆ! ಶ್ರೀರಾಮಕೃಷ್ಣರ ಜೀವನ ಚರಿತ್ರೆ ಬರೆಯುವಾಗ ಮ್ಯಾಕ್ಸ್ ಮುಲ್ಲರ್ ಸ್ವಾಮಿ ವಿವೇಕಾನಂದರಿಂದ ಕೆಲವು ಮಾಹಿತಿಗಳನ್ನು ಬಯಸಿದರು. ಆದರೆ ಸ್ವಾಮೀಜಿ ಆ ಕಾರ್ಯವನ್ನು ತಮ್ಮ ಸೋದರ ಸಂನ್ಯಾಸಿಗಳಾದ ಸ್ವಾಮಿ ಶಾರದಾನಂದರಿಗೆ ವಹಿಸಿದರು. ತಾವೇ ಆ ಕಾರ್ಯವನ್ನು ಮಾಡಲು ಹಿಂಜರಿದುದಕ್ಕೆ ಕಾರಣವನ್ನು ಹೀಗೆ ವಿವರಿಸುತ್ತಾರೆ: "ಒಂದು ವೇಳೆ ನಾನೇನಾದರೂ ಶ್ರೀರಾಮಕೃಷ್ಣರ ಕುರಿತಾಗಿ ಅವರಿಗೆ ಹೇಳಹೊರಟಿದ್ದರೆ, ತತ್ತ್ವಶಾಸ್ತ್ರಗಳಿಂದ, ಧರ್ಮಗ್ರಂಥಗಳಿಂದ ಹಾಗೂ ಕ್ರೈಸ್ತಧರ್ಮ ಗ್ರಂಥಗಳಿಂದ ಕೂಡ ವಿಪುಲವಾಗಿ ಉದ್ಧರಿಸಿ ಹೇಳುತ್ತಾ, ಜಗತ್ತಿನ ಮಿಕ್ಕೆಲ್ಲ ಅವತಾರಗಳಿಗಿಂತಲೂ ಶ್ರೀರಾಮಕೃಷ್ಣರು ಪರಮಶ್ರೇಷ್ಠರು ಹೇಗೆಂಬುದನ್ನು ನಿಸ್ಸಂದಿಗ್ಧವಾಗಿ ಸಾಬೀತುಪಡಿಸುತ್ತಿದ್ದೆ. ಆದರೆ ಬಹುಶಃ ಆ ವೃದ್ಧರಿಗೆ (ಮ್ಯಾಕ್ಸ್ ಮುಲ್ಲರ್) ಅದನ್ನು ಜೀರ್ಣಿಸಿಕೊಳ್ಳಲು ಆಗುತ್ತಿರಲಿಲ್ಲವೇನೋ!"

ಅಂದರೆ, ಯಾರೀ ಶ್ರೀರಾಮಕೃಷ್ಣರು? ಈ ಪ್ರಶ್ನೆ ಸದಾ ನಮ್ಮನ್ನು ಕಾಡುತ್ತಿರಲಿ. ನಮ್ಮ ಮನಸ್ಸು ಅವರ ಬಗ್ಗೆ ಸದಾ ಚಿಂತಿಸುತ್ತಿರಲಿ, ಧ್ಯಾನಿಸುತ್ತಿರಲಿ. ಆಗ ಒಂದಲ್ಲ ಒಂದು ದಿನ ಪರಮ ಕೃಪಾಳುವಾದ ಅವರೇ ತಾವು ಯಾರೆಂಬುದನ್ನು ನಮಗೂ ತೋರಿಸಿಕೊಡುತ್ತಾರೆ. ಆ ಸುದಿನಕ್ಕಾಗಿ ಕಾತರದಿಂದ ಕಾಯೋಣ. ✪

## ಪ್ರಹಸನ ಪ್ರಸಂಗ

ಬಹಳ ಹಿಂದಿನಿಂದಲೂ ಪ್ರಸಿದ್ಧವಾಗಿದ್ದ ಕ್ಷೌರಿಕನ ಅಂಗಡಿಯ ಎದುರಿನಲ್ಲಿಯೇ ಮತ್ತೊಂದು ಹೊಸ ಕ್ಷೌರದ ಅಂಗಡಿ ಪ್ರಾರಂಭವಾಯಿತು. ಗಿರಾಕಿಗಳನ್ನು ಆಕರ್ಷಿಸಲು ಹೊಸಬ ತನ್ನ ಅಂಗಡಿಯ ಹೊರಗಡೆ ಒಂದು ದೊಡ್ಡ ಬಣ್ಣಬಣ್ಣದ ಬೋರ್ಡ್ ತೂಗುಹಾಕಿದ: "ಕೇವಲ ಏಳು ರೂಪಾಯಿಗೆ ಕೇಶಶೃಂಗಾರ."

ತನ್ನ ಗಿರಾಕಿಗಳನ್ನು ಕಳೆದುಕೊಳ್ಳಲು ಬಯಸದ ಹಳೆಯ ಅಂಗಡಿಯವನು ಕೂಡಲೇ ತಾನೂ ಒಂದು ದೊಡ್ಡ ಬೋರ್ಡ್ ಬರೆಸಿದ: "ಏಳು ರೂಪಾಯಿಯ ಕೇಶ ಶೃಂಗಾರವನ್ನು ಸರಿಪಡಿಸಲಾಗುತ್ತದೆ."

❖ ❖ ❖

ಹಳ್ಳಿಯಲ್ಲಿ ವಾಸವಾಗಿದ್ದ ಮುದುಕನೊಬ್ಬನು ಆಲೂಗಡ್ಡೆ ಬೆಳೆಯುತ್ತಿದ್ದ ತನ್ನ ನೆಲವನ್ನು ಉಳಲು ಬಯಸಿದ. ಆದರೆ ನಿಶ್ಶಕ್ತಿಯಿಂದ ಅದು ಅವನಿಗೆ ಸಾಧ್ಯವಾಗಲಿಲ್ಲ. ತನ್ನ ಒಬ್ಬನೇ ಮಗನನ್ನು ಕರೆಯೋಣವೆಂದರೆ ಅವನು ಕೊಲೆಯ ಪ್ರಕರಣದಲ್ಲಿ ಸಿಕ್ಕಿಕೊಂಡು ಸೆರೆಮನೆಯಲ್ಲಿ ಬಂದಿಯಾಗಿದ್ದ. ಮುದುಕ ಮಗನಿಗೆ ಕಾಗದ ಬರೆದು ತನ್ನ ಅಳಲನ್ನು ಹೀಗೆ ತೋಡಿಕೊಂಡ:

"ಪ್ರೀತಿಯ ಬಾಬು,

ಈ ಸಲ ನಾನು ನನ್ನ ಜಮೀನಿನಲ್ಲಿ ಆಲೂಗಡ್ಡೆ ಬೆಳೆಯುವುದು ಅಸಾಧ್ಯವೆಂದೇ ತೋರುತ್ತದೆ. ನನಗೆ ವಯಸ್ಸಾಗಿರುವುದರಿಂದ ಅಗೆಯುವ ಕೆಲಸ ನನ್ನಿಂದ ಸಾಧ್ಯವಿಲ್ಲ. ನೀನು ಇಲ್ಲಿದ್ದಿದ್ದರೆ ನನಗೆ ಸಮಸ್ಯೆಗಳೇ ಇರುತ್ತಿರಲಿಲ್ಲ. ನನಗಾಗಿನೀನು ಏನು ಬೇಕಾದರೂ ಮಾಡಬಲ್ಲೆ ಎಂಬ ವಿಶ್ವಾಸ ನನಗಿದೆ. ಇದನ್ನೆಲ್ಲ ನೆನೆದು ಬಹಳ ಬೇಸರವಾಗುತ್ತಿದೆ.

—ಪ್ರೀತಿಯ ತಂದೆ"

ಕೆಲದಿನಗಳ ಬಳಿಕ ಮಗನಿಂದ ಉತ್ತರ ಬಂದಿತು:

"ಪ್ರೀತಿಯ ಅಪ್ಪ,

ದಯವಿಟ್ಟು ನಿನ್ನ ತೋಟವನ್ನು ಅಗೆಯಬೇಡ! ಹೆಣಗಳನ್ನೆಲ್ಲ ನಾನು ಅಲ್ಲಿಯೇ ಹೂತಿಟ್ಟಿರುವೆ. —ಪ್ರೀತಿಯ ಬಾಬು"

ಮರುದಿನ ಬೆಳಗ್ಗೆ ನಾಲ್ಕು ಘಂಟೆಗೇ ಪೋಲೀಸ್ ಅಧಿಕಾರಿಗಳು ಬಂದು ಜಮೀನನ್ನೆಲ್ಲ ಅಗೆದು ಹುಡುಕಾಡಿದರು. ಯಾವ ಹೆಣವೂ ಸಿಗಲಿಲ್ಲ! ಮುದುಕನಲ್ಲಿ ಕ್ಷಮೆ ಯಾಚಿಸಿ, ಹೊರಟುಹೋದರು. ಅದೇ ದಿನದಂದು ಮಗನಿಂದ ಮತ್ತೊಂದು ಪತ್ರ ಬಂದಿತು ಮುದುಕನಿಗೆ:

"ಪ್ರೀತಿಯ ಅಪ್ಪ,

ಈಗ ನೀನು ಆಲೂಗಡ್ಡೆಗಳನ್ನು ನೆಡಬಹುದು. ಈಗಿನ ಸ್ಥಿತಿಯಲ್ಲಿ, ಇದಕ್ಕಿಂತ ಹೆಚ್ಚು ಮಾಡುವುದು ನನ್ನಿಂದ ಸಾಧ್ಯವಿಲ್ಲ. —ಪ್ರೀತಿಯ ಬಾಬು" ✪